ಈ ಬಿತ್ತನೆಯಿಂದ 73 ಟನ್ ಮೀನು ಉತ್ಪಾದನೆಯಾಗಿದೆ.

ಇ) ಮೀನು ಉತ್ಪಾದನೆ ಹೆಚ್ಚಿಸಲು ಯಾವ ಸಂಶೋಧನೆ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಈ ಬಗ್ಗೆ ಯಾವುದೇ ಹೊಸ ಸಂಶೋಧನೆ ಕೈಗೊಂಡಿರುವುದಿಲ್ಲ. ಆದರೆ, ಈ ಮೊದಲೇ ಸಂಶೋಧನೆಯಿಂದ ದೃಢೀಕರಿಸಿರುವ ಸಮಿಶ್ರ ತಳಿ ಮೀನು ಕೃಷಿ ಬಗ್ಗೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಮೀನು ಕೃಷಿಕರಿಗೆ ಮೀನು ಉತ್ಪಾದನೆ ಹೆಚ್ಚಿಸಲು ತಾಂತ್ರಿಕ ಸಲಹೆ ನೀಡುತ್ತಿದ್ದಾರೆ.

ಕರ್ನಾಟಕ ವಿಧಾನ ಸಭೆ

226 ಶ್ರೀ ಸುಭಾಷ.ಆರ್.ಗುತ್ತೇದಾರ್

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಸರ್ಕಾರಿ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಹಾಗೂ ವೃಂದಾವಾರು ವಿವರಗಳನ್ನು ನೀಡುವುದು);

ಇಲಾಖೆಗಳು	ದಿನಗೂಲಿ ನೌಕರರ ಒಟ್ಟು ಸಂಖ್ಯೆ	ವೃಂದವಾರು	
		ಸಿ–ಗ್ರೂಪ್	ಡಿ–ಗ್ರೂಪ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆಳಂದ	130	78	52
ಸಾಮಾಜಿಕ ಅರಣ್ಯ ಇಲಾಖೆ	14	–	14
ಸಮಾಜ ಕಲ್ಯಾಣ ಇಲಾಖೆ	04	02	02
ರೇಷ್ಮೆ ಇಲಾಖೆ	07	01	06
ಒಟ್ಟು	**155**	**81**	**74**

ಆ) ಈ ದಿನಗೂಲಿ ನೌಕರರು ಕಳೆದ ಎಷ್ಟು ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ; (ಇಲಾಖಾವಾರು ಹಾಗೂ ವೃಂದವಾರು ವಿವರಗಳನ್ನು ನೀಡುವುದು);

ಈ ದಿನಗೂಲಿ ನೌಕರರು ದಿನಾಂಕ: 01–07–1984ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆಳಂದ	130	78	52
ಸಾಮಾಜಿಕ ಅರಣ್ಯ ಇಲಾಖೆ	14	–	14
ಸಮಾಜ ಕಲ್ಯಾಣ ಇಲಾಖೆ	04	02	02
ರೇಷ್ಮೆ ಇಲಾಖೆ	07	01	06
ಒಟ್ಟು	**155**	**81**	**74**

ಇ) ದಿನಗೂಲಿ ನೌಕರರಿಗೆ ಯಾವುದೇ ಕೆಲಸವಿಲ್ಲದೆ ಇದ್ದ ಪಕ್ಷದಲ್ಲಿ ಅಂಥವರನ್ನು ಬೇರೆ ಇಲಾಖೆಗಳಿಗೆ ವ್ಯಂದವಾರು ಕೆಲಸಕ್ಕೆ ತೆಗೆದುಕೊಳ್ಳಲಾಗುವುದೇ?

ಬೇರೆ ಇಲಾಖೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

228 ಶ್ರೀ. ಶ್ರೀನಿವಾಸ್. ಎಂ (ಮಂಡ್ಯ)
ಸಿ.ಎಂ.ಉದಾಸಿ ಲೋಕೋಪಯೋಗಿ ಸಚಿವರು

ಅ) ಮದ್ದೂರು ತಾಲ್ಲೂಕು ಕೌಡ್ಲೆಯಿಂದ ಮಂಡ್ಯ ನಗರ ಜಿಲ್ಲಾ ಮುಖ್ಯ ರಸ್ತೆಯನ್ನು ಉನ್ನತೀಕರಿಸಿ ಕೆಶಿಪ್ (1) ರಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ಕಾಮಗಾರಿ ಪ್ರಾರಂಭಿಸಲು ಸರಕಾರ ತೀರ್ಮಾನಿಸಿದ್ದು ನಿಜವಲ್ಲವೇ;

ಮಂಡ್ಯ–ಕೌಡ್ಲೆ ವರೆಗಿನ 33.80 ಕಿ.ಮೀ ಉದ್ದದ ರಸ್ತೆಯ ಉನ್ನತೀಕರಣದ ಕಾಮಗಾರಿಯನ್ನು ಕೆಶಿಪ್–2 ಯೋಜನೆಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಅ) ಹಾಗಿದ್ದಲ್ಲಿ, ಈ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ;

ಇನ್ನೂ ಪ್ರಾರಂಭವಾಗಿರುವುದಿಲ್ಲ.

ಇ) ಕಾಮಗಾರಿಗಾಗಿ ಪೂರ್ಣ ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ;

ಯಾವುದೇ ಅನುದಾನ ಸದರಿ ಕಾಮಗಾರಿಗೆ ಬಿಡುಗಡೆಯಾಗಿರುವುದಿಲ್ಲ.

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಮತ್ತು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?